<u>ಓ.ಎಸ್. ನಂ.455/2013ರಲ್ಲಿ</u>
ಪಿ.ಡಬ್ಲ್ಯೂ-1(ನರಸಿಂಹಮೂರ್ತಿ)

ದಿನಾಂಕ 09-03-2026 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

<u>ಪಾಟೀ ಸವಾಲು ಪ್ರತಿವಾದಿಗಳ ಪರ ಶ್ರೀ ಎಂ.ಡಿ.ಕೆ., ವಕೀಲರಿಂದಃ-</u>

ನನ್ನ ತಾಯಿ ನಾನು 15 ವರ್ಷ ವಯಸ್ಸಿನವನಿದ್ದಾಗ ತೀರಿಕೊಂಡರು. ನನಗೆ ಕನ್ನಡ ಓದಲು, ಬರೆಯಲು ಬರುವುದಿಲ್ಲ. ನಾನು 2005-06ರಲ್ಲಿ ಪೌತಿ ಖಾತೆ ಮಾಡಿಸಿಕೊಂಡೆ. ಅದು ಎಂ.ಆರ್.14/2005-06 ಎಂದರೆ ಸರಿ. ಅಂಜನಪ್ಪ ನನ್ನ ತಂದೆ. ರಾಜಣ್ಣ ನನ್ನ ತಮ್ಮ. ನನ್ನ ಹೆಸರಿಗೆ ಆಗಿದ್ದ ಖಾತೆಯನ್ನು ಪ್ರಶ್ನಿಸಿ ರಾಜಣ್ಣರವರು ಎ.ಸಿ.,ಯವರ ನ್ಯಾಯಾಲಯದಲ್ಲಿ ಅಪೀಲು ಸಲ್ಲಿಸಿದ್ದರು ಎಂದರೆ ಸರಿ. ಸದರಿ ಅಪೀಲು ಪುರಸ್ಕೃತಗೊಂಡು ನಿಮ್ಮ ಮತ್ತು ರಾಜಣ್ಣನ ಹೆಸರಿಗೆ ಜಂಟಿ ಖಾತೆ ಮಾಡುವಂತೆ ಆದೇಶವಾಯಿತು ಎಂದರೆ ಸಾಕ್ಷಿಯು ಕೇಸು ನಡೆಯುತ್ತಿದ್ದಾಗಲೇ ಜಂಟಿ ಖಾತೆ ಆಗಿ ಹೋಯಿತು, ಆಸ್ತಿ ನನ್ನದೇ ಎಂದು ನುಡಿಯುತ್ತಾರೆ. ಎ.ಸಿ.,ಯವರ ನ್ಯಾಯಾಲಯದ ಆದೇಶವನ್ನು ಪ್ರಶ್ನಿಸಿ ಅಪೀಲು ಸಲ್ಲಿಸಿಲ್ಲ, ಈ ಕೇಸು ಮಾತ್ರ ಹಾಕಿದ್ದೇನೆ.

2. ಈ ಕೇಸನ್ನು ಜಮೀನು ನಮಗೆ ಬರಬೇಕೆಂದು ಹಾಕಿದ್ದೇನೆ. ಪೌತಿ ಖಾತೆಗೆ ಅರ್ಜಿ ಸಲ್ಲಿಸಿದ ಕಾಲಕ್ಕೆ ಪಂಚಾಯಿತಿ ಪಾರಿಕತ್ ಕೊಟ್ಟಿದ್ದೆ. ಪೌತಿ ಖಾತೆ ಮಾಡಿಸಿಕೊಳ್ಳುವಾಗ ಮೃತ ವ್ಯಕ್ತಿಯ ಮರಣ ಪ್ರಮಾಣಪತ್ರ ಮತ್ತು ವಂಶವೃಕ್ಷ ಕೊಡಬೇಕು ಎಂದರೆ ಸಾಕ್ಷಿಯು ವಂಶವೃಕ್ಷವನ್ನು ಸಹ ಕೊಟ್ಟಿದ್ದೆ ಎಂದು ನುಡಿಯುತ್ತಾರೆ. ಪೌತಿ ಖಾತೆ ಮಾಡಿಸಿಕೊಳ್ಳುವಾಗ ಪ್ರತಿವಾದಿಗಳಿಗೆ ನೀವು ತಿಳಿಸಿಲ್ಲ ಎಂದರೆ ಸಾಕ್ಷಿಯು ಅವರೇ ನಿಂತು ಮಾಡಿಸಿದ್ದಾರೆ ಎಂದು ನುಡಿಯುತ್ತಾರೆ. ನಾನು ದಾವೆಯಲ್ಲಿ ಹೇಳಿರುವಂತೆ ಯಾವುದೇ ಪಂಚಾಯಿತಿ ಪಾರಿಕತ್ ಆಗಿಲ್ಲ ಎಂದರೆ ಸರಿಯಲ್ಲ. ಆದ್ದರಿಂದಲೇ ನಾನು ನನ್ನ ತಾಯಿಯ ಮರಣಾ ನಂತರ ಸುಳ್ಳು ಪೌತಿ ಖಾತೆ ಮಾಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನೀವು ವಂಶವೃಕ್ಷ ಕೊಟ್ಟಿದ್ದಲ್ಲಿ ಜಂಟಿ ಖಾತೆ ಮಾಡುತ್ತಿದ್ದರು ಎಂದರೆ ಸಾಕ್ಷಿಯು ಪಂಚಾಯಿತಿ ಪಾರಿಕತ್‌ನ ಪ್ರಕಾರ ನನಗೆ ಬಂದಿದೆ, ಅವರಿಗೆ

ಕೊಟ್ಟಿರುವುದನ್ನು ಮಾರಿಕೊಂಡಿದ್ದಾರೆ ಎಂದು ನುಡಿಯುತ್ತಾರೆ.

3. ನನ್ನ ತಾಯಿಯ ಮರಣಾ ನಂತರ ನಾನು ಸುಳ್ಳು ಪೌತಿ ಖಾತೆ ಮಾಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಿಮ್ಮ ತಾಯಿ ಜೀವಿತ ಅವಧಿಯಲ್ಲಿ ಆಸ್ತಿಯನ್ನು ಯಾರಿಗೂ ಬರೆದಿಲ್ಲ ಎಂದರೆ ಸಾಕ್ಷಿಯು ಇಲ್ಲ, ನನ್ನ ತಂದೆಯೇ ನನಗೆ ಮಾಡಿಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಯಾವುದೇ ಪಾರಿಕತ್ ಆಗಿಲ್ಲ, ಆಸ್ತಿಯನ್ನು ಕಬಳಿಸಬೇಕೆಂದು ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಆಸ್ತಿಯ ಬೆಲೆ ಜಾಸ್ತಿಯಾಗಿರುವುದರಿಂದ ನನ್ನ ತಾಯಿಯ ಹೆಸರಿನಲ್ಲಿದ್ದ ಆಸ್ತಿಯನ್ನು ಲಪಟಾಯಿಸಬೇಕೆಂದು ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಪೌತಿ ಖಾತೆ ಮಾಡಿಸಿಕೊಳ್ಳುವಾಗ ನಿಮ್ಮ ತಾಯಿಯ ಮರಣಾ ಪ್ರಮಾಣಪತ್ರ, ನಿಮ್ಮ ಆಧಾರ್ ಕಾರ್ಡ್ ಮಾತ್ರ ಕೊಟ್ಟು ಪೌತಿ ಖಾತೆ ಮಾಡಿಸಿಕೊಂಡಿದ್ದೀರಿ ಎಂದರೆ ಸಾಕ್ಷಿಯು ಪಾರಿಕತ್ ಕೊಟ್ಟಿದ್ದೆ ಎಂದು ನುಡಿಯುತ್ತಾರೆ. ವಂಶವೃಕ್ಷ ಹಾಜರುಪಡಿಸಿರುವುದರಿಂದ ಪೌತಿ ಖಾತೆ ಎಂದು ಬಂದಿದೆ, ಪಂಚಾಯಿತಿ ಪಾರಿಕತ್ತನ್ನು ನಾನು ಹಾಜರುಪಡಿಸಿರಲಿಲ್ಲ ಎಂದರೆ ಸರಿಯಲ್ಲ. ಯಾವುದೇ ಪಂಚಾಯಿತಿ ಪಾರಿಕತ್ ಆಗಿಲ್ಲದ ಕಾರಣ ಅದನ್ನು ಹಾಜರುಪಡಿಸಿರಲಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.